# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1056

ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ. (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 18.12.2024

ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಂಗಾಮಿ ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳು ಎಷ್ಟು; ಹಂಗಾಮಿ ಸಾಗುವಳಿ ಪಡೆದಿರುವ ಎಷ್ಟು ಜನ ಬಡ ರೈತರಿಗೆ ಖಾಯಂ ಮಾಡಲಾಗಿದೆ; | ರಾಜ್ಯದಲ್ಲಿ 11789 ಹಂಗಾಮಿ ಸಾಗುವಳಿ ಚೀಟಿ ನೀಡಲಾಗಿದೆ. ಈ ಪೈಕಿ 5112 ಹಂಗಾಮಿ ಸಾಗುವಳಿಯನ್ನು ಖಾಯಂಗೊಳಿಸಲಾಗಿದೆ. |
| ಆ) | ಕರ್ನಾಟಕ ಭೂ ಮಂಜೂರಾತಿ ನಿಯಮಗಳ ನಿಯಮ 23ರಲ್ಲಿ ಜಿಲ್ಲಾಧಿಕಾರಿಗಳಿಗೆ ಹಂಗಾಮಿ ಸಾಗುವಳಿ ಚೀಟಿ ಪಡೆದಿರುವ ರೈತರುಗಳಿಗೆ ಖಾಯಂ ಮಾಡಲು ಒದಗಿಸಿರುವ ಅಧಿಕಾರದಡಿ ಕ್ರಮವಹಿಸಿರುವ ಪ್ರಕರಣಗಳೆಷ್ಟು; | |
| ಇ) | ಕರ್ನಾಟಕ ಭೂ ಮಂಜೂರಾತಿ ನಿಯಮಗಳ ನಿಯಮ 23ರಲ್ಲಿ ಜಿಲ್ಲಾಧಿಕಾರಿಗಳಿಗೆ ಹಂಗಾಮಿಯನ್ನು ಖಾಯಂ ಮಾಡಲು ಪ್ರತ್ಯಾಯೋಜಿಸಿದ್ದರೂ ಇದುವರೆಗೂ ಯಾವುದೇ ಕ್ರಮವಹಿಸದಿರಲು ಕಾರಣಗಳೇನು; | ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 23ರಲ್ಲಿ ನಿಗದಿಪಡಿಸಿರುವಂತೆ ಹಂಗಾಮಿ ಸಾಗುವಳಿ ಚೀಟಿ ನೀಡುವಾಗ ವಿಧಿಸಿರುವ ಷರತ್ತುಗಳ ಪೂರೈಕೆ, ಕಿಮ್ಮತ್ತು ಪಾವತಿ, ದಾಖಲೆಗಳ ನೈಜತೆಯನ್ನು ಪರಿಶೀಲಿಸಿ ಹಂಗಾಮಿ ಸಾಗುವಳಿಯನ್ನು ಖಾಯಂ ಆಗಿ ಮಂಜೂರು ಮಾಡಲು ಜಿಲ್ಲಾಧಿಕಾರಿಗಳು ಕ್ರಮವಹಿಸುತ್ತಿದ್ದಾರೆ. |
| ಈ) | ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸಿರುವಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳ ನಿಯಮ-23ರಡಿ ಬಾಕಿ ಇರುವ ಹಂಗಾಮಿ ಪ್ರಕರಣಗಳನ್ನು ಖಾಯಂಗೊಳಿಸಲು ಯಾವಾಗ ಕ್ರಮವಹಿಸಲಾಗುವುದು. | |

ಸಂಖ್ಯೆ: ಆರ್‌ಡಿ 147 ಎಲ್‌ಜಿಕ್ಯೂ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು